> ಅವ್ಯಕ್ತವಾಗಿರುವ ನಮ್ಮ ಮನದ ಭಾವಗಳನ್ನು ಒಮ್ಮೊಮ್ಮೆ ನಮಗೇ ಅರಿಯಲಾಗುವುದಿಲ್ಲ. ಸ್ನೇಹಿತೆಯರೂ ಮದುವೆಯಾಗಿ ಬೇರೆಡೆಗೆ ಹೊರಟುಹೋಗಿದ್ದರು. ವಿವಾಹಿತರಾಗಿ... ಉದ್ಯೋಗಸ್ಥರಾಗಿ... ಬೆಳಗಾವಿಯಲ್ಲೇ ಉಳಿದವರು ಕೆಲವೇ ಮಂದಿ. ಅನೇಕ ವರ್ಷಗಳು ಹಾಗೇ ಕಳೆದುಹೋದವು.

ಗಟ್ಟಿಯಾಗೇ ಇರುತ್ತಿತ್ತು. ಇಷ್ಟೆಲ್ಲ ಮುಖ್ಯ ಕಾರ್ಯಕ್ರಮ ಮುಗಿಸಿ ಎಂಟಾಣೆಯ ತರಕಾರಿ ಖರೀದಿಸಿ ಮನೆ ಸೇರುತ್ತಿದ್ದೆವು. ಅಲ್ಲಿಗೆ ನಮ್ಮ ಗುರುವಾರದ ಪಿಕ್ನಿಕ್ ಮುಗಿದಂತೆ.

'ಆಯಿತಲ್ಲ...' ಎಂದಿರಾ? ಉಹ್ಞೂಂ... ಈಗ ಮತ್ತೊಂದು ಅಧ್ಯಾಯ ಆರಂಭ. ಅಪ್ಪ ಅಮ್ಮ ಇಬ್ಬರಿಗೂ ನಾನಲ್ಲಿ ತಿನ್ನುವುದು ಸುತಾರಾಂ ಇಷ್ಟವಿಲ್ಲ. ಮನೆಗೆ ಬಂದಾಕ್ಷಣ ಅಮ್ಮ, "ಸಾಯಿಬಾಬಾನ ಪ್ರಸಾದ ಆತೇನು?" ಎಂದು ವ್ಯಂಗ್ಯವಾಗಿ ಕೇಳುತ್ತಿದ್ದಳು. "ಹ್ಞೂಂ... ಆತು" ಎಂದು ಚುಟುಕಾಗಿ ಉತ್ತರಿಸುತ್ತಿದ್ದೆ. ಅವಳೇ ಬಾಳುನ ಪಾವ್ ಭಾಜಿಗೆ 'ಸಾಯಿಬಾಬಾನ ಪ್ರಸಾದ'ವೆಂಬ ನಾಮಧೇಯವನ್ನು ದಯಪಾಲಿಸಿದ್ದು. ಮಂದಿರದ ಹತ್ತಿರವೇ ಇತ್ತಲ್ಲ. ಅಪ್ಪನಿಗೆ ಈಗ ಕೋಪ ಏರುತ್ತಿತ್ತು. "ಅದು ಧೊಡ್ಡ ಮೋರಿ. ಇಡೀ ಟಿಳಕವಾಡಿ ಗಟಾರದ ನೀರು ಅಲ್ಲೇ ಹರೀತಾವ. ಅದರ ಬಾಜೂಕನ ಅಂವ ಪಾವ್‌ಭಾಜಿ ಮಾಡ್ತಾನ. ನೀವೂ ಅಲ್ಲೇ ನಿಂತು ತಿಂತೀರಿ. ಥೂ... ಹೊಲಸು... ಎಷ್ಟು ಹೇಳಿದ್ರೂ ಬುದ್ಧಿ ಬರೂದುಲ್ಲ ನಿನಗ" ಎಂದು ಪುಷ್ಪಾರ್ಚನೆ ಮಾಡುತ್ತಿದ್ದರು. ನಾನೇನೂ ವಿಚಲಿತಳಾಗುತ್ತಿರಲಿಲ್ಲ. ಅಮ್ಮ ಸುಮ್ಮನಿರದೇ, "ಆ ಗಟಾರದ ನೀರೂ ಸ್ವಲ್ಪ ಹಾಕಿರ್ತಾನ ನೋಡು" ಎಂದು ಕಾಲೆಳೆಯುತ್ತಿದ್ದಳು. ನಾನು, "ಇರಬೇಕು... ಅದಕ್ಕ ಅಷ್ಟ ರುಚಿಯಾಗ್ತದ..." ಎಂದು ಭಂಡತನದಿಂದ ಉತ್ತರಿಸುತ್ತಿದ್ದೆ. ದಿನಕಳೆದಂತೆ ಬಾಳುನ ಪಾವ್‌ಭಾಜಿ ಪ್ರಖ್ಯಾತವಾಗತೊಡಗಿತು. ಹಾಗೆಯೇ ಬೆಲೆಯೂ ಏರತೊಡಗಿತು. ಪ್ಲೇಟಿಗೆ ಎರಡು... ಎರಡೂವರೆ ರೂಪಾಯಿಗಳ ಗಡಿ ದಾಟಿತು. ಕೆಲವೇ ಜನ ಹೋಗುತ್ತಿದ್ದಾಗ ಬೈಯುತ್ತಿದ್ದ ಅಪ್ಪ ಸುತ್ತಲಿನ ಮುಕ್ಕಾಲು ಪಾಲು ಜನರೆಲ್ಲ ಸಂಜೆ ಅಲ್ಲಿಗೇ ಗುಳೆ ಹೊರಟಾಗ ಬೆಕ್ಕಸ ಬೆರಗಾಗಿ, "ನೋಡ್ರಿ... ಹುಚ್ಚಮಂದಿ. ಜನಮರುಳೋ... ಜಾತ್ರಿ ಮರುಳೋ ಅನ್ನೋಹಂಗ ರಸ್ತೆದಾಗ ನಿಂತು ತಿಂತಾರ" ಎಂದು ಸ್ನೇಹಿತರ ಮುಂದೆ ಟೀಕಿಸುತ್ತಿದ್ದರು. ಅಂದಿನ ದಿನಗಳಲ್ಲಿ ಬೀದಿಯ ಬದಿಯಲ್ಲಿ ನಿಂತು ತಿನ್ನುವುದು ಅಸಭ್ಯತೆಯ ಲಕ್ಷಣವೆಂದು ಪರಿಗಣಿಸಲ್ಪಡುತ್ತಿತ್ತು. ಹೊರಗೆ ತಿನ್ನುವುದೇನಿದ್ದರೂ ಹೋಟೆಲ್‌ನಲ್ಲಿ ಕುಳಿತು ತಿನ್ನಬೇಕು. ದರ್ಶಿನಿಗಳ ಕಲ್ಪನೆಯೇ ಇಲ್ಲದ ಕಾಲ. ಬೆಳಗಾವಿಯ ಹೋಟೆಲ್‌ಗಳಲ್ಲಿ ಆಗ ಪಾವ್‌ಭಾಜಿ ದೊರೆಯುತ್ತಿರಲಿಲ್ಲ. ಅಥವಾ ಆ ಬಗ್ಗೆ ನಮಗೆ ಗೊತ್ತಿರಲಿಲ್ಲ. ಪುಣೆ, ಮುಂಬೈಗಳಿಂದ ಬಂದ ಜನರಂತೂ ಬಾಳೂನ ಪಾವ್‌ಭಾಜಿಗೆ ಲಗ್ಗೆ ಹಾಕುತ್ತಿದ್ದರು. ಕಾರಣ... ಅಲ್ಲಿ ಒಂದು ಪ್ಲೇಟಿಗೆ ಹತ್ತರಿಂದ ಇಪ್ಪತ್ತು ರೂಪಾಯಿಗಳಂತೆ. ಇಲ್ಲಿ ಡಬಲ್ ಬೆಣ್ಣೆ ಹಾಕಿದರೂ ಅತಿ ಹೆಚ್ಚೆಂದರೆ ಐದು ರೂಪಾಯಿಗಳು. ಯಥಾಪ್ರಕಾರ ಅಪ್ಪ, "ಪೂರಾ ಹುಚ್ಚ ಮಂದಿ" ಎಂದು ಬಿರುದು ಕೊಟ್ಟು ಸುಮ್ಮನಾಗಿದ್ದರು.